ಆ) ಅಭಿವೃದ್ಧಿ ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ರಾಜ್ಯಸರ್ಕಾರದ ಮೂಲಕ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ, ಕೇಂದ್ರ ಸರ್ಕಾರವು ಸದರಿ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿ, ಹಣ ಬಿಡುಗಡೆ ಮಾಡಿದ ನಂತರ ಗದಗ ವಿಭಾಗಕ್ಕೆ ಹಣವನ್ನು ಬಿಡುಗಡೆ ಮಾಡಲಾಗುವುದು

17 (62) ಶ್ರೀ ಪಾಟೀಲ್ ಎಸ್ ಎಸ್ (ಮುಂಡಗರಿ) ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ಅರಣ್ಯ ಇಲಾಖೆಗೆ ಹಿಂದಿನ 3 ವರ್ಷಗಳ ಆಯವ್ಯಯದಲ್ಲಿ ಒದಿಗಸಿದ ಹಣವೆಷ್ಟು ಹಾಗೂ ಇದರಲ್ಲಿ ಖರ್ಚಾದ ಹಣವೆಷ್ಟು , (ವಿವರ ನೀಡುವುದು) ,

ಆ) ರಾಜ್ಯದಲ್ಲಿ ಅರಣ್ಯೀಕರಣಕ್ಕಾಗಿ ಖರ್ಚು ಮಾಡಿದ ಹಣ ಎಷ್ಟು ಹಾಗೂ ಎಷ್ಟು ಲಕ್ಷ ಸಸಿಗಳನ್ನು ಇದುವರೆವಿಗೂ ನೆಡಲಾಗಿದೆ ಹಾಗೂ ಅವುಗಳಲ್ಲಿ ಎಷ್ಟು ಪ್ರಮಾಣದ ಸಸಿಗಳು ಉಳಿದಿವೆ (3 ವರ್ಷಗಳ ವಿವರ ನೀಡುವುದು) ?

ಶ್ರೀ ಸಿ ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಹಿಂದಿನ ಮೂರು ವರ್ಷಗಳ ಆಯವ್ಯಯ ಅಂದಾಜಿನಲ್ಲಿ ಒದಗಿಸಿದ ಹಣ ಹಾಗೂ ಖರ್ಚಾದ ಹಣದ ವಿವರ ಈ ಕೆಳಕಂಡಂತಿದೆ

ಕ್ರ ಸಂ	ವರ್ಷ	ಆಯವ್ಯಯ ಅಂದಾಜಿನಲ್ಲಿ ಒದಗಿಸಿದ ಒಟ್ಟಾರೆ ಹಣ (ರೂ ಕೋಟಿಗಳಲ್ಲಿ)	ಖರ್ಚಾದ ಹಣದ ಮೊತ್ತ (ರೂ ಕೋಟಿಗಳಲ್ಲಿ)
1	2003–04	247 07	332 39
2	2004–05	257 53	287 99
3	2005–06	259 77	253 34

2003–04 ಮತ್ತು 2004–05ನೇ ಸಾಲಿನ ಆಯವ್ಯಯದಲ್ಲಿ ಅವಕಾಶ ಕಲ್ಪಿಸಿರುವ ಮೊತ್ತಕ್ಕಿಂತ ಹೆಚ್ಚಿಗೆ ವೆಚ್ಚವಾಗಿದ್ದು, ಇದು ವಾಸ್ತವಿಕವಾಗಿ ಹೆಚ್ಚುವರಿಯಾಗಿ ವೆಚ್ಚ ಮಾಡಿದ ಹಣವಲ್ಲ ಪರಿಹಾರಾತ್ಮಕ ನೆಡುತೋಪು ಬೆಳೆಸಲು ಬರುವ ಮೊತ್ತ ಮತ್ತು ಅರಣ್ಯಾಭಿವೃದ್ಧಿ ತೆರಿಗೆ ರೂಪದಲ್ಲಿ ವಸೂಲಾಗುವ ಮೊತ್ತವನ್ನು ವರ್ಗಾವಣೆ ಮೂಲಕ ಅರಣ್ಯಾಭಿವೃದ್ಧಿ ನಿಧಿ ಲೆಕ್ಕಕ್ಕೆ ಜಮಾ ತೆಗೆದುಕೊಳ್ಳಲಾಗುತ್ತಿದ್ದು, ಈ ಎರಡು ವರ್ಷಗಳಲ್ಲಿ ನಿಗಧಿತ

ಆಯವ್ಯಯದ ಗುರಿಗಿಂತ ಹೆಚ್ಚಿನ ಮೊತ್ತ ಸಂಗ್ರಹವಾಗಿ ವರ್ಗಾವಣೆ ಯಾಗಿದೆ ನಿಗಧಿತ ಗುರಿಗಿಂತ ಹೆಚ್ಚುವರಿಯಾಗಿ ವರ್ಗಾವಣೆಗೊಂಡ ಮೊತ್ತವನ್ನು ವೆಚ್ಚವೆಂದು ಪರಿಗಣಿಸಿರುವುದರಿಂದ ಹೆಚ್ಚಿನ ವೆಚ್ಚವೆಂದು ಕಂಡು ಬರುತ್ತದೆ

ಆ) ರಾಜ್ಯದಲ್ಲಿ ಅರಣ್ಯೀಕರಣಕ್ಕಾಗಿ ಕಳೆದ ಮೂರು ವರ್ಷಗಳಿಂದ ಖರ್ಚು ಮಡಿದ ಹಣದ ವಿವರ ಹಾಗೂ ನೆಟ್ಟ ಸಸಿಗಳ ವಿವರ ಈ ಕೆಳಕಂಡಂತಿವೆ

ವರ್ಷ	ಖರ್ಚು ಮಾಡಿದ ಹಣ (ರೂ ಲಕ್ಷಗಳಲ್ಲಿ)	ನೆಟ್ಟ ಸಸಿಗಳು (ಲಕ್ಷಗಳಲ್ಲಿ)
2003–04	5572 00	143 452
2004–05	8774 120	263 854
2005–06	9428 756	316 423

"ಸ್ಪೆಮ್" ಎಂಬ ಸಂಸ್ಥೆಯವರಿಂದ ಮೌಲ್ಯಮಾಪನ ಮಾಡಲಾಗಿದ್ದು ಜೆ ಬಿ ಐ ಸಿ ಯೋಜನೆಯಡಿ ಬದುಕುಳಿದ ಸಸಿಗಳ ಶೇಕಡವಾರು ಪ್ರಮಾಣ 78 6 ಆಗಿರುತ್ತದೆ

18 (81) ಶ್ರೀಮತಿ ಶಕುಂತಲಾ ಟಿ ಶೆಟ್ಟಿ (ಪುತ್ತೂರು) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯ ಸರ್ಕಾರಿ ನೌಕರರ 5ನೇ ವೇತನ ಆಯೋಗದ ವರದಿ ಸರ್ಕಾರಕ್ಕೆ ಒಪ್ಪಿಸಲಾಗಿದೆಯೇ ,

ಆ) ಹಾಗಿದ್ದಲ್ಲಿ, ಇದು ಯಾವಾಗಿನಿಂದ ಜಾರಿಗೆ ಬರುತ್ತದೆ ,

ಇ) ಕೇಂದ್ರ ಸರ್ಕಾರದವರು ಈಗಾಗಲೇ 6ನೇ ವೇತನ ಆಯೋಗವನ್ನೂ ಸಹ ರಚನೆಯಾದರೂ, ರಾಜ್ಯದಲ್ಲಿ ಇನ್ನೂ 5ನೇ ವೇತನ ಆಯೋಗ ತನ್ನ ಪೂರ್ಣ ಪ್ರಮಾಣದ ವರದಿಯನ್ನು ನೀಡದೆ ವಿಳಂಬ ಧೋರಣೆ ಅನುಸರಿಸಲು ಕಾರಣವೇನು ,

ಈ) ಇದರಿಂದ ನೌಕರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಉ) ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ ?